# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ.ಜಿ.ಪಾಟೀಲ್**
**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 618**
**ಉತ್ತರಿಸಬೇಕಾದ ದಿನಾಂಕ : 21.02.2023**
**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಯಾದಗಿರಿ ಜಿಲ್ಲೆ ಗುರುಮಿಠಕಲ್ಲು ತಾಲ್ಲೂಕಿನ ದೋರನಹಳ್ಳಿಯ ಹಾಲಿನ ಶೀಥಲೀಕರಣವು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಲಬುರಗಿ ಹಾಲು ಒಕ್ಕೂಟದ ಯಾದಗಿರಿ ಜಿಲ್ಲೆ, ಶಹಪುರ ತಾಲ್ಲೂಕಿನ ದೋರನಹಳ್ಳಿಯಲ್ಲಿ 2010-11ನೇ ಸಾಲಿನಲ್ಲಿ 10000 ಲೀಟರ್ ಸಾಮರ್ಥ್ಯದ ಬಿ.ಎಂ.ಸಿ. ಸ್ಥಾಪಿಸಿ, ದಿನಂಪ್ರತಿ 4000-5000 ಲೀಟರ್ ಹಾಲು ಶೇಖರಣೆ ಮಾಡಲಾಗುತ್ತಿದ್ದು. ಕ್ರಮೇಣವಾಗಿ ಹಾಲು ಶೇಖರಣೆ ಕಡಿಮೆಯಾಗಿ 2017ರಲ್ಲಿ ಸ್ಥಗಿತಗೊಂಡಿರುತ್ತದೆ. |
| ಆ | ಬಂದಿದ್ದಲ್ಲಿ ದೋರನಹಳ್ಳಿಯ ಹಾಲಿನ ಶೀಥಲೀಕರಣ ಘಟಕದ ಬಗ್ಗೆ ಸರ್ಕಾರ ಈವರೆಗೂ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಕಲಬುರಗಿ ಹಾಲು ಒಕ್ಕೂಟದ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳ ಸಹಯೋಗದೊಂದಿಗೆ ದೋರನಹಳ್ಳಿ ಹಾಲಿನ ಶೀಥಲೀಕರಣ ಘಟಕದ ವ್ಯಾಪ್ತಿಯಲ್ಲಿ 43 ಗ್ರಾಮಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸಿ ಹಾಲು ಶೇಖರಿಸಿ. ದೋರನಹಳ್ಳಿ ಬಿ.ಎಂ.ಸಿ. ಕೇಂದ್ರಕ್ಕೆ ಹಾಲು ಸರಬರಾಜು ಮಾಡುವಂತೆ ಅನೇಕ ಬಾರಿ ಕಾರ್ಯಪ್ರವೃತ್ತರಾಗಿ ಕಾರ್ಯಕೈಗೊಳ್ಳಲಾಗಿದೆ. ಆದರೆ ಗ್ರಾಮಗಳಲ್ಲಿನ ಜನರು ಆಸಕ್ತಿ ತೋರಿಸದೇ ಇರುವುದರಿಂದ ಸಂಘಗಳನ್ನು ಪ್ರಾರಂಭಿಸಿ ಶೀಥಲೀಕರಣ ಘಟಕ ಪುನರ್ ಆರಂಭಿಸಲು ಕಷ್ಟಸಾಧ್ಯವಾಗಿರುತ್ತದೆ. |
| ಇ | ದೋರನಹಳ್ಳಿಯಲ್ಲಿರುವ ಶೀಥಲೀಕರಣವು ಹಾಲಿನ ಎಷ್ಟು ಲೀಟರು ಸಾಮರ್ಥ್ಯ ಹೊಂದಿದೆ; (ಮಾಹಿತಿ ನೀಡುವುದು) | ದೋರನಹಳ್ಳಿಯಲ್ಲಿ ಶೀಥಲೀಕರಣಕ್ಕಾಗಿ 10,000 ಲೀ. ಸಾಮರ್ಥ್ಯದ ಬಿ.ಎಂ.ಸಿ. ಘಟಕವಿದೆ. |

**ಸಂಖ್ಯೆ: ಸಿಒ 36 ಸಿಸಿಬಿ 2023**

**(ಎಸ್.ಟಿ.ಸೋಮಶೇಖರ್)**
ಸಹಕಾರ ಸಚಿವರು